**ಸಿಹಿರುಚಿಯ ಹಾಗೂ ಹೆಚ್ಚು ನೀರಿನಂಶ ಹೊಂದಿರುವ ಕಲ್ಲುಬಾಳೆಗಳನ್ನು ಕಂಡರೆ ಆನೆಗಳಿಗೆ ವಿಪರೀತ ಪ್ರೀತಿ. ಅಂಥ ಕಲ್ಲುಬಾಳೆ ಸಸಿಗಳನ್ನು ಗೃಹಿಣಿಯೊಬ್ಬರು ಕಾಡಿನಲ್ಲಿ ನೆಟ್ಟ ಅನುಭವ ಕಥನ.**


ಕಾಡಿನ ನಡುವೆ ಕಲ್ಲುಬಾಳೆಗಳು


ಕಲ್ಲುಬಾಳೆ ಸಸಿ ನೆಡುತ್ತಿರುವ ಲೇಖಕಿ.

ಕಾಟ. ಹುಟ್ಟಿರುವ ಅಷ್ಟೂ ಸಸಿಗಳನ್ನು ಇಲ್ಲಿ ನೆಟ್ಟರೆ ಆನೆಯನ್ನು ಸ್ವಾಗತ ಮಾಡಿದ ಹಾಗೆ ಆಗುತ್ತದೆ. ನಾಳೆ ಆನೆಗಳು ಮನೆಯಂಗಳ, ತೋಟಕ್ಕೆ ಬರುವುದು ಗ್ಯಾರಂಟಿ. ಆಗ ಏನು ಮಾಡುತ್ತಿ?'.

ಅವರು ಹೇಳುವುದು ಸರಿ. ಕಲ್ಲುಬಾಳೆ ಎಂದರೆ ಆನೆಗಳಿಗೆ ಜೀವ. ಅದು ಇತರ ಬಾಳೆಯಂತಲ್ಲ. ಬೀಜದಿಂದಲೇ ಗಿಡ ಆಗುವ, ಎಂಥ ಕಲ್ಲು ನೆಲದಲ್ಲೂ ಬೆಳೆಯುವ ಬಾಳೆ. ಅದರ ಬೊಡ್ಡೆ ಸುಮಾರು ಒಂದೂವರೆ ಮೀಟರಿನಷ್ಟು ಸುತ್ತಳತೆ ಹೊಂದಿರುವುದರಿಂದ ಮತ್ತು ನೀರಿನಂಶ ಅಧಿಕವಾಗಿರುವುದರಿಂದ ಆನೆಗಳ ಹೊಟ್ಟೆ ತುಂಬುತ್ತದೆ ಹಾಗೂ ಬಾಯಾರಿಕೆ ತಣಿಯುತ್ತದೆ. ಕಾಂಡ ಸಿಹಿ ರುಚಿ ಹೊಂದಿರುವುದರಿಂದ ಆನೆಗಳು ಅವುಗಳನ್ನು ಹುಡುಕಿಕೊಂಡು ಬರುತ್ತವೆ. ಕಾಡಿನ ಆನೆ ಯಾವುದೇ ಬಾಳೆಯ ಬಾಳೆಹಣ್ಣು ಅಥವಾ ಕಾಯಿ ತಿನ್ನುವುದಿಲ್ಲ. ಅದಕ್ಕೆ ಬಾಳೆಯ ಕಾಂಡವೇ ಬೇಕಾದದ್ದು. ಇದು ನನಗೆ ಗೊತ್ತಾದದ್ದು ಹೇಗೆಂದರೆ, ಹಿಂದೆ ಎಷ್ಟೋ ಸಾರಿ ನಮ್ಮ ಬಾಳೆ ತೋಟಕ್ಕೆ ಆನೆ ಬಂದಾಗ ಅದು ಬಾಳೆಯ ಕಾಂಡ ಸಿಗಿದು ಅದರೊಳಗಿನ ದಿಂಡನ್ನು ತಿಂದಿದೆಯೇ ಹೊರತು ಅದರ ಹಣ್ಣು, ಕಾಯಿಗಳನ್ನು ಮುಟ್ಟೆಯೂ ನೋಡಿರಲಿಲ್ಲ. ಈಗ ಕಲ್ಲುಬಾಳೆ ಸಸಿಗಳನ್ನು ಅಂಗಳ, ತೋಟ ಎಂದು ನೆಟ್ಟರೆ ನಾನೇ ಮೈಮೇಲೆ ಆಪತ್ತನ್ನು ಎಳೆದುಕೊಂಡ ಹಾಗೆ ಆಗುತ್ತದೆ. ಇದಕ್ಕೆ ಏನು ಪರಿಹಾರ? ಎಂದು ಚಿಂತಿಸುತ್ತಿರುವಾಗ ಗಂಡನೇ ಒಂದು ಐಡಿಯಾ ಕೊಟ್ಟರು. 'ನಾನು ಕಾಡಿನ ಮಧ್ಯದಲ್ಲಿರುವ ಜಲಪಾತಕ್ಕೆ ಅಳವಡಿಸಿದ ಪೈಪಿನ ಬುಡದಿಂದ ಕಸ ತೆಗೆಯಲು ವಾರಕ್ಕೊಮ್ಮೆಯಾದರೂ ಕಾಡಿಗೆ ಹೋಗುವುದು ನಿನಗೆ ಗೊತ್ತಿದೆ. ಆಗ ನೀನೂ ಜೊತೆಗೆ ಬಾ. ಒಟ್ಟಿಗೆ ಕಲ್ಲುಬಾಳೆ ಸಸಿಗಳನ್ನು ತಾ. ನಾನು ಕಸ ತೆಗೆಯುವ ಹೊತ್ತಿನಲ್ಲಿ ನಿನಗೆ ಸಸಿ ನೆಡಬಹುದು'. ಅವರು ಹೇಳಿದ್ದು ನನಗೆ ಒಪ್ಪಿಗೆಯಾಯ್ತು.

ಆ ಜಲಪಾತ ಇರುವುದು ನಮ್ಮ ಮನೆಯಿಂದ ಸುಮಾರು ಎರಡು ಕಿ.ಮೀ. ದೂರದ ದಟ್ಟ ಅರಣ್ಯದಲ್ಲಿ. ನಮಗೆ ಕುಡಿಯಲು ನೀರು ಅಲ್ಲಿಂದಲೇ ಬರುವುದು. ನಮ್ಮ ಮನೆಗೆ ಬೆಳಕು ಬರುವುದೂ ಅದೇ ನೀರಿನಿಂದ ತಯಾರಿಸಿದ ವಿದ್ಯುತ್ತಿನಿಂದ. ಜೋರು ಮಳೆ ಬರುವ ಹೊತ್ತಿನಲ್ಲಿ ತರಗೆಲೆ, ಮರಳು, ಕಸಕಡ್ಡಿಗಳು ಜಲಪಾತದ ನೀರಿನಲ್ಲಿ ಸೇರಿ ಅಲ್ಲೇ ಇಟ್ಟ ನಮ್ಮ ಪೈಪಿನ ಬುಡಕ್ಕೆ ಬಂದು ನಿಲ್ಲುವುದರಿಂದ ನೀರು ಮನೆಗೆ ಬರುವುದು ನಿಂತುಹೋಗುತ್ತದೆ. ಆ ಕಸ ತೆಗೆಯಲು ಮಳೆಗಾಲದಲ್ಲಿ ವಾರಕ್ಕೊಮ್ಮೆಯಾದರೂ ಅಲ್ಲಿಗೆ ಹೋಗಬೇಕಾಗುತ್ತದೆ.

ಈ ಸಾರಿ ಗಂಡ ಹೋಗುವಾಗ ನಾನೂ ಹೋದೆ. ಒಂದು ಕೈಯಲ್ಲಿ ಕತ್ತಿ, ಕೊಡೆ. ಇನ್ನೊಂದು ಕೈಯಲ್ಲಿ ಕಲ್ಲುಬಾಳೆ ಸಸಿಗಳು. ಗಂಡ ಮುಂದೆ ಮುಂದೆ ಹೋಗುತ್ತಿದ್ದರೆ ನಾನು ಕತ್ತಿಯಲ್ಲಿ ಗುಂಡಿ ತೋಡಿ ಒಂದೊಂದೇ ಸಸಿ ನೆಡುತ್ತಾ ಅವರನ್ನು ಹಿಂಬಾಲಿಸುತ್ತಿದ್ದೆ. ಪ್ರತಿ ಸಸಿಗೂ ಗುಂಡಿ ತೋಡುವ ಪ್ರಮೇಯ ಬರಲಿಲ್ಲ. ಏಕೆಂದರೆ ಕೆಲವೆಡೆ ಆನೆಗಳ, ಕಾಟಿಗಳ ಹೆಜ್ಜೆಗುರುತೇ ಸಸಿ ನೆಡುವಷ್ಟು ಆಳವಾಗಿ ಇದ್ದವು. ಪಾದದಿಂದ ಹಿಡಿದು ತಲೆಯವರೆಗೆ ಹತ್ತುವ ಇಂಬಳಗಳನ್ನೂ ಲೆಕ್ಕಿಸದೆ ಸಸಿ ನೆಟ್ಟು ಮಣ್ಣು ಮುಚ್ಚುತ್ತಾ ಅರಣ್ಯದಲ್ಲಿ ಮೇಲೆ ಮೇಲೆ ಹೋದೆ.

ದೂರದಲ್ಲೆಲ್ಲೋ ಆನೆ ಕೊಂಬೆ ಮುರಿಯುವ ಸದ್ದು. ಸಸಿಗಳನ್ನೇನೋ ನೆಟ್ಟು ಆಗಿತ್ತು. ಹೆದರಿಕೆಯಿಂದ ಮೈ ನಡುಗಲು ಶುರುವಾಯಿತು. ಗಂಡನಿಗಾಗಿ ನೋಡಿದೆ. ಎಲ್ಲೂ ಕಾಣಲಿಲ್ಲ. ನನಗೆ ಆ ಅರಣ್ಯದಲ್ಲಿ ಎತ್ತ ಸಾಗಬೇಕೆಂದು ಗೊತ್ತಾಗಲಿಲ್ಲ. ಎಷ್ಟು ನಡೆದರೂ ಜಲಪಾತ ಸಿಗಲಿಲ್ಲ. ಗಂಡನನ್ನು 'ಓಯ್, ಎಲ್ಲಿ ಇದ್ದೀರಿ?' ಎಂದು ಕೂಗಿ ಕೂಗಿ ಕರೆದೆ. ನನ್ನ ಕೂಗು ಆ ಅರಣ್ಯದಲ್ಲಿ ಅರಣ್ಯರೋದನವಾಯಿತೇ ವಿನಾ ಯಾವ ಪ್ರಯೋಜನವೂ ಆಗಲಿಲ್ಲ. ಹುಚ್ಚುನಾಯಿಯಂತೆ ಸಿಕ್ಕಸಿಕ್ಕಲೆಲ್ಲ ಓಡಿದೆ. ಆಗ ದೂರದಲ್ಲಿ ಜಲಪಾತದ ಭೋರ್ಗರೆವ ಸದ್ದು ಕೇಳಿಸಿತು. ಅದೇ ದಿಕ್ಕು ಹಿಡಿದು ನಡೆದು ಜಲಪಾತ ತಲುಪಿದೆ. ಗಂಡ ಇದು ಯಾವುದರ ಪರಿವೆಯೂ ಇಲ್ಲದೆ ಪೈಪಿನ ಬುಡದಿಂದ ಕಸ, ಮರಳು ತೆಗೆಯುವುದರಲ್ಲಿ ಮಗ್ನರಾಗಿದ್ದರು. ಹೋದ ಜೀವ ಮರಳಿ ಬಂದಂತಾಯಿತು.

ಇಷ್ಟೆಲ್ಲ ಆದರೂ ನಾನು ನನ್ನ ಛಲ ಬಿಡಲಿಲ್ಲ. ಗಂಡ ಕಸ ತೆಗೆಯಲು ಜಲಪಾತಕ್ಕೆ ಹೋಗುವಾಗಲೆಲ್ಲ ಸಸಿಗಳನ್ನು ಹೊತ್ತುಕೊಂಡು ನಾನೂ ಹೋದೆ. ಅಂಗಳದ ಬಾಳೆ ಬುಡದಲ್ಲಿರುವ ಎಲ್ಲ ಸಸಿಗಳನ್ನು ನೆಟ್ಟು ಮುಗಿಸಿದ ಮೇಲೆಯೇ ನಾನು ನಿರಾಳವಾದದ್ದು. ಆನೆಗಳು ತಿಂದು ಒಂದು ಗಿಡ ಉಳಿಸಿ ಹೋದರೂ ಸಾಕು, ಅದು ಹಾಕಿದ ಗೊನೆಯಿಂದ ಬೀಜಗಳು ಬಿದ್ದು ಬುಡದಲ್ಲಿ ಹಲವಾರು ಸಸಿಗಳು ಹುಟ್ಟಿಕೊಳ್ಳುತ್ತವೆ. ಅಲ್ಲದೆ ಆ ಹಣ್ಣನ್ನು ಮಂಗ, ಹಕ್ಕಿ ತಿನ್ನುವಾಗ ಉದುರಿಸಿದ ಬೀಜಗಳಿಂದ ಮತ್ತು ಅವುಗಳು ಹಾಕುವ ಹಿಕ್ಕೆಗಳಲ್ಲಿರುವ ಬೀಜಗಳಿಂದಲೂ ಇನ್ನೂ ಹಲವೆಡೆ ಸಸಿಗಳಾಗುತ್ತವೆ. ಅವು ಚಿಗುರಿ ಬಾಳೆ ಗಿಡವಾಗಿ ಮತ್ತೆ ಆನೆ ಹೊಟ್ಟೆ ಸೇರುತ್ತವೆ. ನಾನು ಕಲ್ಲುಬಾಳೆ ಸಸಿ ನೆಟ್ಟದ್ದು ಸಾರ್ಥಕವಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in